**ಆಯುಕ್ತರು ಹಾಗೂ ಕಾರ್ಯದರ್ಶಿ/ ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-2**

**ಶಿಕನಿ/ಆ (2)/ಬ.ಮ.ಪ್ರ.ವಿ.ವೇ(42)/2014-15** **ದಿನಾಂಕ 04.02.2015**

ಕಾರ್ಯ ನಿರ್ವಾಹಕ ನಿರ್ದೇಶಕರು
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಬೆಂಗಳೂರು

ಮಾನ್ಯರೇ,

ವಿಷಯ: ಬಡ ಕುಟುಂಬಗಳ ಮಕ್ಕಳ ವೃತ್ತಿಪರ ಶಿಕ್ಷಣಕ್ಕೆ ವಿಶೇಷ ಶಿಷ್ಯವೇತನವನ್ನು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳ ವತಿಯಿಂದ ನೀಡುವ ಬಗ್ಗೆ
ಉಲ್ಲೇಖ: ದಿನಾಂಕ 22.08.2014ರಂದು ನಡೆದ ನಿಧಿಗಳ ರಾಜ್ಯಸಮಿತಿ ಸಭೆಯ ನಡಾವಳಿಗಳು

--***--

ಕರ್ನಾಟಕ ರಾಜ್ಯ ವಿದ್ಯಾಥಿಗಳ ಕ್ಷೇಮಾಭಿವೃದ್ಧಿ ನಿಧಿಯ ವತಿಯಿಂದ ಸರ್ಕಾರಿ/ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ವೃತ್ತಿಪರ ಶಿಕ್ಷಣಕ್ಕೆ ದಾಖಲಾತಿ ಹೊಂದಿದ ಎಲ್ಲ ವರ್ಗಗಳಿಗೆ ಸೇರಿದ ಪ್ರತಿಭಾವಂತ ಆಯ್ದ ಬಡ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸದ ಆರ್ಥಿಕ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ವಿಶೇಷ ಶಿಷ್ಯ ವೇತನ ನೀಡುವ ಹೊಸ ಯೋಜನೆಯೊಂದನ್ನು ಜಾರಿಗೊಳಿಸಲಾಗಿದ್ದು, ಈ ಯೋಜನೆಯ ವಿವರ ಹಾಗೂ ನಿಬಂಧನೆಗಳು ಕೆಳಕಂಡಂತೆ ಇರುತ್ತವೆ.

1. ವಿದ್ಯಾರ್ಥಿಯು ಸರ್ಕಾರಿ/ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅರ್ಹತಾ ಪರೀಕ್ಷೆಯೂ ಸೇರಿದಂತೆ ಒಟ್ಟಾರೆ (ಅಗ್ರಿಗೇಟ್) ಗರಿಷ್ಟ ಅಂಕ ಗಳಿಸಿರಬೇಕು. ಗರಿಷ್ಟ ಅಂಕ ಗಳಿಸಿ, ಹಂಚಿಕೆಯಾದ ಕಾಲೇಜಿನಲ್ಲಿ ದಾಖಲಾತಿ ಹೊಂದಿರಬೇಕು.
2. ಈ ಶಿಷ್ಯವೇತನವನ್ನು ಪಡೆಯುವ ಅರ್ಹತೆ ಗಳಿಸುವ ವಿದ್ಯಾರ್ಥಿಯು ತನ್ನ ಪ್ರಾಥಮಿಕ/ಪ್ರೌಢ ಶಿಕ್ಷಣವನ್ನು ಕರ್ನಾಟಕದಲ್ಲಿಯೇ ಮಾಡಿರಬೇಕು ಹಾಗೂ ಕನಿಷ್ಟ ಹತ್ತು ವರ್ಷಗಳ ಶಿಕ್ಷಣವನ್ನು ಕರ್ನಾಟಕದಲ್ಲಿಯೇ ಪೂರೈಸಿರಬೇಕು.
3. ನಿಧಿಗಳ ವತಿಯಿಂದ ಈ ವಿದ್ಯಾರ್ಥಿಗೆ ಆತನ/ಆಕೆಯ ವೃತ್ತಿಪರ ಶಿಕ್ಷಣ ಪೂರ್ತಿಗೊಳ್ಳುವವರೆಗೆ, ಪ್ರತಿ ಸೆಮಿಸ್ಟರ್‌ನಲ್ಲಿ ತನ್ನ ವೃತ್ತಿಪರ ಕೋರ್ಸ್‌ನಲ್ಲಿ, ಕನಿಷ್ಟ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಅಂಕಪಟ್ಟಿಯ ಪ್ರತಿಯನ್ನು ನಿಧಿಗಳ ಕಛೇರಿಗೆ ಒದಗಿಸಿದ ನಂತರ ಆಯಾ ವರ್ಷದ ಪ್ರೋತ್ಸಾಹಕ ಶಿಷ್ಯವೇತನವನ್ನು ಬಿಡುಗಡೆ ಮಾಡಲಾಗುವುದು. ಒಂದು ವೇಳೆ ಆ ವಿದ್ಯಾರ್ಥಿಯು ತನ್ನ ಕೋರ್ಸ್ ಅವಧಿಯಲ್ಲಿ ಪ್ರಥಮ ದರ್ಜೆಗಿಂತಲೂ ಕಡಿಮೆ ಅಂಕಗಳನ್ನು ಗಳಿಸಿದಲ್ಲಿ, ಆ ಸೆಮಿಸ್ಟರ್ ಅವಧಿಯಿಂದ ಈ ಶಿಷ್ಯವೇತನವನ್ನು ಮುಂದುವರೆಸಲಾಗುವುದಿಲ್ಲ.
4. ಕರ್ನಾಟಕ ರಾಜ್ಯ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸುವ ವೃತ್ತಿಪರ ಕೋರ್ಸ್‌ಗಳಾದ ಕೆಳಕಂಡ ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಎಲ್ಲಾ ಕೋರ್ಸ್‌ಗಳಿಗೆ ಅವುಗಳ ಹೆಸರಿನ ಮುಂದೆ ಸೂಚಿಸಿರುವ ಪ್ರತಿಭಾ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ಅ. ವೈದ್ಯಕೀಯ – 25 ವಿದ್ಯಾರ್ಥಿಗಳು – ತಲಾ ರೂ.30,000/-

ಆ. ಇಂಜಿನಿಯರಿಂಗ್ – 25 ವಿದ್ಯಾರ್ಥಿಗಳು – ತಲಾ ರೂ.20,000/-

ಇ. ಕೃಷಿ – 10 ವಿದ್ಯಾರ್ಥಿಗಳು – ತಲಾ ರೂ.10,000/-

ಈ. ಪಶುವಿಜ್ಞಾನ – 10 ವಿದ್ಯಾರ್ಥಿಗಳು – ತಲಾ ರೂ.10,000/-

5. ವಿದ್ಯಾರ್ಥಿಯು ಬಡಕುಟುಂಬಕ್ಕೆ ಸೇರಿದವನಾಗಬೇಕಿದ್ದಲ್ಲಿ, ಮೊದಲ ಬಾರಿ ಆತನ ಅರ್ಜಿ ಸಲ್ಲಿಕೆ ಸಂದರ್ಭದಲ್ಲಿ, ಆತನ ಪೋಷಕರ ಒಟ್ಟು ವಾರ್ಷಿಕ ಆದಾಯ ಬೆಂಗಳೂರು ನಗರದ ದರಗಳಲ್ಲಿನ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಸಮಾನಾಂತರ ವೇತನದ ಆದಾಯವನ್ನು (ವೇತನ ಶ್ರೇಣಿಯ ಕನಿಷ್ಟ ವೇತನ + ತುಟ್ಟಿಭತ್ಯೆ + ಮನೆ ಬಾಡಿಗೆ ಭತ್ಯೆ + ನಗರ ಪರಿಹಾರ ಭತ್ಯೆ + ವೈದ್ಯಕೀಯ ಭತ್ಯೆ ಸೇರಿದಂತೆ) ಮೀರಿರಬಾರದು. ಈ ಆದಾಯವನ್ನು ಪರಿಗಣಿಸುವಾಗ ಆತ ಸಲ್ಲಿಸಿರುವ ಆದಾಯ ಪ್ರಮಾಣ ಪತ್ರದ ಆದಾಯವನ್ನು ಪರಿಗಣಿಸಬಹುದು. ಪೋಷಕರು ಸರ್ಕಾರಿ/ಖಾಸಗಿ ನೌಕರರಾಗಿದ್ದರೂ/ ಕೃಷಿ/ಸ್ವಂತ ಉದ್ಯೋಗದಲ್ಲಿದ್ದರೂ ಮೇಲೆ ತಿಳಿಸಿದ ಆದಾಯ ಮಿತಿಯೊಳಗೆ ಇದ್ದಲ್ಲಿ ಈ ಯೋಜನೆಗೆ ಆ ವಿದ್ಯಾರ್ಥಿ ಅರ್ಹರಾಗುತ್ತಾರೆ.
6. ಒಮ್ಮೆ ಸಲ್ಲಿಸಲಾದ ಆದಾಯ ವಿವರಗಳ ಆಧಾರದಲ್ಲಿಯೇ ಆತನ ವೃತ್ತಿಪರ ಕೋರ್ಸ್‌ನ ಅವಧಿಗೆ ಆತನ ಪ್ರತಿ ವರ್ಷದ ಅಂಕಗಳ ಆಧಾರದ ಮೇಲೆ ಪ್ರತಿಭಾ ಶಿಷ್ಯವೇತನ ಮಂಜೂರು ಮಾಡಲಾಗುವುದು ಹಾಗೂ ಈ ದರದಲ್ಲಿ ಬದಲಾವಣೆ ಇರುವುದಿಲ್ಲ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರತಿ ವರ್ಷ ನಡೆಸುವ ವೃತ್ತಿಪರ ಶಿಕ್ಷಣದ ಕೋರ್ಸ್‌ಗಳಿಗೆ ವಿದ್ಯಾರ್ಥಿಯ ಪೋಷಕರ ಆದಾಯದ ವಿವರವನ್ನು ಪಡೆಯುತ್ತಿದ್ದು, ಆ ವಿದ್ಯಾರ್ಥಿಗಳ ಅಗ್ರಿಗೇಟ್ ಅಂಕಗಳ ಆಧಾರದ ಮೇಲೆ ವೃತ್ತಿಪರ ಶಿಕ್ಷಣದ ಕೋರ್ಸ್‌ಗಳಿಗೆ ದಾಖಲಾತಿಯ ಪ್ರಕ್ರಿಯೆಯನ್ನು ಪರಾಮರ್ಶಿಸಲಾಗುತ್ತಿರುತ್ತದೆ.

2014-15ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕೆ ಪ್ರವೇಶ ಪರೀಕ್ಷೆಯನ್ನು ಬರೆದ ವಿದ್ಯಾರ್ಥಿಗಳ ಪೈಕಿ ಅತ್ಯಂತ ಗರಿಷ್ಟ ಅಗ್ರಿಗೇಟ್ ಅಂಕ ಗಳಿಸಿ, ಸಂಬಂಧಿತ ಕಾಲೇಜಿಗೆ ಮೇಲೆ ತಿಳಿಸಲಾದ ಯಾವುದಾದರೂ ವೃತ್ತಿಪರ ಕೋರ್ಸ್‌ಗೆ ದಾಖಲಾತಿ ಹೊಂದಿದ ಮೇಲ್ಕಂಡ ವಾರ್ಷಿಕ ಆದಾಯದೊಳಗೆ ಇರುವ ವಿದ್ಯಾರ್ಥಿಗಳ ವಿವರಗಳನ್ನು (ಇಂಜಿನಿಯರಿಂಗ್-35; ವೈದ್ಯಕೀಯ-35; ಕೃಷಿ-15 ಹಾಗೂ ಪಶುವಿಜ್ಞಾನ -15ಸಂಖ್ಯೆ) ಒದಗಿಸಬೇಕಾಗಿ ಕೋರಲಾಗಿದೆ. ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸಲು ಕೋರಲಾಗಿದೆ.

ಅಲ್ಲದೇ ಈ ನಿಟ್ಟಿನಲ್ಲಿ ಅಗತ್ಯವಿರಬಹುದಾದ ಮಾಹಿತಿಯನ್ನು ಪಡೆಯಲು ಈ ಸಾಲಿನ ವೃತ್ತಿಪರ ಶಿಕ್ಷಣದ ಪ್ರವೇಶ ಪ್ರಕ್ರಿಯೆ ಆರಂಭಿಸುವ ಮುನ್ನ ಹೊರತರುವ ಪ್ರಾಸ್ಪೆಕ್ಟಸ್‌ನಲ್ಲಿಯೂ ಮೇಲ್ಕಂಡ ಅಂಶಗಳನ್ನು ಸಹ ಸೇರಿಸಿ ಈ ಪ್ರತಿಭಾವಂತ ಬಡ ವಿದ್ಯಾರ್ಥಿ ಸ್ನೇಹಿ ಯೋಜನೆಗೆ ಪ್ರಚಾರವನ್ನೂ ನೀಡಲು ಕೋರಲಾಗಿದೆ.

ತಮ್ಮ ನಂಬುಗೆಯ,

(ಪ್ರಹ್ಲಾದಗೌಡ)
ಸಹನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು